ವಿಷಯ:- ಕೈಗಾರಿಕಾ ವಿಸ್ತರಣಾಧಿಕಾರಿ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 61(483)

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ)

ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಾಲ್ಲೂಕು ಮಟ್ಟದ ಕೈಗಾರಿಕಾ ವಿಸ್ತರಣಾಧಿಕಾರಿಗಳವರ ಕಛೇರಿಯಲ್ಲಿ ಒಬ್ಬನೆ ವ್ಯಕ್ತಿ ಇರುವುದು ಹಾಗೂ ಅವರು ಅನೇಕ ಸಂಘ ಸಂಸ್ಥೆಗಳಿಗೆ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗೆ ಇದ್ದಲ್ಲಿ , ಸದರಿ ಹುದ್ದೆಯನ್ನು ಮೇಲ್ದರ್ಜೆಗೆ ಕೈಗಾರಿಕಾ ಸಹಾಯಾಧಿಕಾರಿಯ ಹುದ್ದೆಯನ್ನು ಸೃಷ್ಟಿ ಮಾಡಲು ಹಾಗೂ ಅವರಿಗೆ ಕ್ಷೇತ್ರ ಹಾಗೂ ಕಛೇರಿಯ ಸಿಬ್ಬಂದಿಯನ್ನು ಮಂಜೂರು ಮಾಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆ ಏನು?

ಇ) ಮಾಡುವುದಾದಲ್ಲಿ ಎಂದಿನಿಂದ ಕೆಲಸ ಆರಂಭಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್

(ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು)

ಸರ್ಕಾರದ ಗಮನಕ್ಕೆ ಬಂದಿದೆ.

ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಆದ್ದರಿಂದ ಸರ್ಕಾರಕ್ಕೆ ಯಾವುದೇ ತೊಂದರೆ ಇರುವುದಿಲ್ಲ.

ಈ ಪ್ರಸ್ತಾವನೆಯನ್ನು ಆದಷ್ಟು ಬೇಗನೆ ಕಾರ್ಯಗತಗೊಳಿಸಲಾಗುವುದು.

ವಿಷಯ:- ಗಂಡಸೀ ಕ್ಷೇತ್ರದಲ್ಲಿ ಗೃಹ ನಿರ್ಮಾಣ ಮಂಡಲಿಯವರಿಂದ ಆಶ್ರಯ ಯೋಜನೆಯ ಮನೆಗಳ ಪ್ರಗತಿ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ63(2)

ಶ್ರೀ ಬಿ.ಶಿವರಾಮ(ಗಂಡಸಿ)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯ ಗಂಡಸೀ ಕ್ಷೇತ್ರದಲ್ಲಿ ಆಶ್ರಯ ಯೋಜನೆಯ ಮನೆಗಳನ್ನು ಗೃಹ ನಿರ್ಮಾಣ ಮಂಡಲಿಯಿಂದ ಕಟ್ಟಲು ಯಾವ ಕಂಟ್ರಾಕ್ಟರ್‌ರಿಗೆ ವಹಿಸಲಾಗಿದೆ?

ಆ) ಆ ಮನೆಗಳ ನಿರ್ಮಾಣದ ಪ್ರಗತಿಯು ಯಾವ ಹಂತದಲ್ಲಿದೆ ಮತ್ತು ಕರಾರಿಗೆ ಒಳಪಟ್ಟ ಮನೆಗಳ ನಿರ್ಮಾಣವಾಗುತ್ತಿದೆಯೇ?

ಇ) ಅದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು?

ಶ್ರೀ ಗೋಪಿನಾಥ ಆರ್. ಸಾಂಡ್ರ

(ವಸತಿ ಸಚಿವರು)

ಮೆಸರ್ಸ್ ಯಶಸ್ವೀ ಕನ್ಸ್ಟ್ರಕ್ಷನ್ಸ್, ನಂ.40, ಕೋರಮಂಗಲ, ಬೆಂಗಳೂರುರವರಿಗೆ ವಹಿಸಿ ಕೊಡಲಾಗಿದೆ.